**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1060/2019**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಮೆಹರಾಜ ಪಿರ್ಜಾದೆ

ತಂದೆಯ ಹೆಸರು : ಮೀರನ್ ಪಿರ್ಜಾದೆ

ವಯಸ್ಸು : 48 ವರ್ಷ

ಉದ್ಯೋಗ : ಮುಂಬಯಿಯಲ್ಲಿ ವ್ಯಾಪಾರ

ವಾಸ್ತವ್ಯ : ಸಿದ್ದೀಕ್ ಸ್ಟ್ರೀಟ್ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 23/02/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

1978 ರಲ್ಲಿ ಜಾಲಿಯ ನಸ್ಲೀಬ್ ಭಾಗದಲ್ಲಿ ನನ್ನ ತಂದೆಯವರು 4 ಎಕರೆ 8 ಗುಂಟೆ ಜಾಗವನ್ನು ಪಡೆದಿದ್ದರು. 1996 ರಲ್ಲಿ ನನ್ನ ತಂದೆಯವರು ಆಸ್ತಿಯನ್ನು ಭಾಗ ಮಾಡಿದ್ದರು. ಚಾಸ 4 ರಿಂದ 8 ರವರಿಗೆ ಸದರಿ ಆಸ್ತಿಯನ್ನು ಪಾಲು ಮಾಡಿದು ಇರುತ್ತದೆ. 2 ಎಕರೆ ಜಾಗವನ್ನು ನನ್ನ ಹೆಸರಿಗೆ ಕ್ರಯ ಪತ್ರದ ಮೂಲಕ ಮಾಡಿದ್ದು ಇರುತ್ತದೆ. ನಾನು ಬಾಂಬೆಯಲ್ಲಿ ವಾಸ ಮಾಡುತ್ತೇನೆ. ನಾನು 2014 ರಲ್ಲಿ ಆಸ್ತಿಯ ಆರ್ ಟಿ ಸಿ ಯನ್ನು ತೆಗೆದು ನೋಡಿದಾಗ ನಾನು ನನ್ನ ಪಾಲನ್ನು ನನ್ನ ಅಜ್ಜಿಯವರ ಹೆಸರಿನಲ್ಲಿ ಗಿಫ್ಟ ಡೀಡ್ ಮಾಡಿದ್ದೇನೆಂದು ನಮೂದು ಇದ್ದುದು ಕಂಡುಬಂದಿರುತ್ತದೆ. ಸದರಿ ಗಿಫ್ಟ ಡೀಡ್ ಗೆ ಮೂರು ಜನ ಆರೋಪಿತರು ಸಾಕ್ಷಿ ಆಗಿರುತ್ತಾರೆ. ನಂತರ 2013 ರಲ್ಲಿ ನನ್ನ ಅಜ್ಜಿಯಾದ ಮಾಮಾಜೂನಿ ಸದರಿ ಪ್ರಕರಣದ ಆರೋಪಿ 1 ರವರ ಹೆಸರಿಗೆ ಈ ಆಸ್ತಿಯನ್ನು ಮಾರಾಟ ಮಾಡಿದ್ದು ಇರುತ್ತದೆ. 2014 ರಲ್ಲಿ 1 ನೇ ಆರೋಪಿ 11 ನೇ ಆರೋಪಿಗೆ ಸದರಿ ಜಾಗವನ್ನು ಮಾರಾಟ ಮಾಡಿರುತ್ತಾರೆ. ನಂತರ ನಾನು 2014 ರಲ್ಲಿ ಖಾಸಗಿ ಪಿರ್ಯಾದನ್ನು ಆರೋಪಿತರು ವಿರುದ್ದ ಈ ನ್ಯಾಯಾಲಯದಲ್ಲಿ ನೀಡಿದ್ದು ಇರುತ್ತದೆ. ಖಾಸಗಿ ದೂರನ್ನು ನೀಡಿದ ನಂತರ ಪೊಲೀಸರಿಗೆ ತನಿಖೆ ಮಾಡಲು ನ್ಯಾಯಾಲಯದಿಂದ ಆದ ಆದೇಶದಂತೆ ಪೊಲೀಸರು ಸ್ಥಳಕ್ಕೆ ಬಂದು ವಿಚಾರಣೆ ಮಾಡಿದ್ದು ಇರುತ್ತದೆ. ಶ್ರೀ ಕೆ ಎಸ್ ರೈ ಎನ್ನುವ ವಕೀಲರು ಸದರಿ ದಾಖಲಾತಿಯನ್ನು ಮಾಡಿದವರು ಆಗಿರುತ್ತಾರೆ. ಈ ಪ್ರಕರಣದ ಸರ್ವೆ ನಂಬರ್ ಕುರಿತು ಸಿವಿಲ್ ದಾವೆ ನಂಬರ್ 48/2015 ಭಟ್ಕಳ ನ್ಯಾಯಾಲಯದಲ್ಲಿ ನಡೆಯುತ್ತಿದೆ.

**ಪಾಟೀ ಸವಾಲು : 1, 4, 6 , 8 ಮತ್ತು 9 ನೇ ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ**

ಸದರಿ ಪ್ರಕರಣದ ಸಿವಿಲ್ ದಾವೆ ಈಗಲೂ ಚಾಲ್ತಿ ಇದ್ದು ಸದರಿ ಸಿವಿಲ್ ದಾವೆಯ ಪಲಿತಾಂಶ ಈಗಲೂ ಬಾಕಿ ಇದೆ. ಇಂದು ನ್ಯಾಯಾಲಯದಲ್ಲಿ ನನಗೆ ಖಾಸಗಿ ದೂರನ್ನು ತೋರಿಸಿದ್ದು ಇಲ್ಲಾ ಎಂದರೆ ಸರಿಯಲ್ಲ. ಗಿಪ್ಟ ಡೀಡ್ ದಾಖಲೆಗೆ ನಕಲಿ ಸಹಿಯನ್ನು ಹಾಕಿರುವುದಾಗಿ ಪ್ರಕರಣ ದಾಖಲಿಸಿದ್ದು ಇರುತ್ತದೆ. ಇಂದು ನ್ಯಾಯಾಲಯದಲ್ಲಿ ಸದರಿ ಗಿಪ್ಟ ಡೀಡ್ ಅನ್ನು ನನಗೆ ತೋರಿಸಿರುವುದಿಲ್ಲ. ಖಾಸಗಿ ದೂರನ್ನು ದಾಖಲಿಸುವ ಮೊದಲು ನಾನು ಠಾಣೆಯಲ್ಲಿ ಯಾವುದೇ ದೂರು ದಾಖಲಿಸಿರುವುದಿಲ್ಲ. ಎಸ್ ಪಿ ಕಚೇರಿಗೆ ಪತ್ರವನ್ನು ಬರೆದ ಬಗ್ಗೆ ನನಗೆ ಈಗ ನೆನಪಿಗೆ ಬರುತ್ತಿಲ್ಲ. ಗಿಪ್ಟ ಡೀಡ್ ನಲ್ಲಿ ನನ್ನ ಹೆಸರನ್ನು ಹೇಳಿ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎಪ್ ಎಸ್ ಎಲ್ ವರದಿಯನ್ನು ನಾನು ನೋಡಿರುತ್ತೇನೆ ಆದರೆ ಇಂದು ನ್ಯಾಯಾಲಯದಲ್ಲಿ ಸದರಿ ಎಪ ಎಸ ಎಲ ವರದಿ ನೋಡಿರುವುದಿಲ್ಲ. 2 ನೇ ಆರೋಪಿಯ ವಿರುದ್ಧ ನಾನು ಖಾಸಗಿ ದೂರು ನೀಡಿದ್ದು ಇಲ್ಲಾ ಹಾಗೂ 2 ನೇ ಆರೋಪಿಯ ಪರಿಚಯ ನನಗೆ ಇಲ್ಲಾ. 2 ಮತ್ತು 11 ನೇ ಆರೋಪಿಗಳನ್ನು ಹೊರತುಪಡಿಸಿ ಉಳಿದೆಲ್ಲಾ ಆರೋಪಿತರು ನಮ್ಮ ಕುಟುಂಬದ ಸದಸ್ಯರಾಗಿರುತ್ತಾರೆ. ನಾನು ಕುಟುಂಬದಿಂದ ಪ್ರತ್ಯೇಕವಾಗಿ ವಾಸವಾಗಿರುತ್ತೇನೆ. ಸದರಿ ಆಸ್ತಿಯ ಪ್ರಕರಣದಿಂದ ಆರೋಪಿತರ ನಡುವೆ ನನ್ನ ಸಂಬಂಧವು ಅಷ್ಟಕಷ್ಟೇ ಇದೆ. ಆಸ್ತಿಗೆ ಸಂಬಂಧಿಸಿದಂತೆ ನಮ್ಮ ನಡುವೆ ತಕರಾರು ಇದ್ದ ಕಾರಣ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ಬರೆದ ವಿಷಯ ಸುಳ್ಳು ಎಂದರೆ ಸರಿಯಲ್ಲ. ದೂರನ್ನು ನೀಡುವ ಕಾಲಕ್ಕೆ ಸಾಕ್ಷಿದಾರರ ಹೆಸರನ್ನು ಹಾಕಿದ್ದ ಬಗ್ಗೆ ನನಗೆ ನೆನಪಿಲ್ಲ. ನನ್ನ ಹೆಸರನ್ನು ಹೇಳಿ ನನ್ನ ಸಹಿಯನ್ನು ಯಾರೂ ಹಾಕಿದ್ದೇ ಇಲ್ಲಾ ಎಂದರೆ ಸರಿಯಲ್ಲ. ಆರೋಪಿತರು ನಾನು ಹೇಳಿದಂತಹ ಯಾವುದೇ ಅಪರಾಧ ಮಾಡಿದ್ದು ಇಲ್ಲಾ ಎಂದರೆ ಸರಿಯಲ್ಲ.

**ಪಾಟೀ ಸವಾಲು : 7 ನೇ ಆರೋಪಿ ಪರ ವಕೀಲರು 1,4, 6 , 8 ಮತ್ತು 9 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**